

# ಬರೆಯದ ಪತ್ರಗಳು-1

ಅತ್ಯಂತ ಪ್ರೀತಿಯ ಅಮ್ಮನಿಗೆ ತಿಳಿಸುವುದೇನೆಂದರೆ:

ಅಮ್ಮಾ ನಾನು ನಿನ್ನೆಯೂ ನಿಮ್ಮನ್ನು ಕನಸು ಕಂಡೆ. ವಳ್ಳಿಯೂ ಇದ್ದಳು. ಅರುಳ್ ಅಳುತ್ತಿದ್ದನು. ನೀವುಗಳು ಇಲ್ಲವೆನ್ನುವುದು ಬಿಟ್ಟರೆ ನನಗಿಲ್ಲಿ ತೊಂದರೆಗಳೇನು ಇಲ್ಲ. ಇವರು ನನಗೆ ಎರಡೂ ಹೊತ್ತು ಊಟ ಹಾಕುತ್ತಾರೆ, ಚಪಾತಿ, ಈರುಳ್ಳಿ ಮೆಣಸಿನಕಾಯಿ. ಒಮ್ಮೊಮ್ಮೆ ಸಾರು ಇರುತ್ತದೆ. ತಿಂಗಳಿಗೊಂದು ಸಲ ಪೂಜೆ ಇರುತ್ತದೆ ಅಂದು ಔತಣ. ಆಗ ನಾನು ವಳ್ಳಿಯನ್ನು ನೆನಪಿಸಿಕೊಂಡು ಅಳುತ್ತೇನೆ.

ಕೆಲವು ದಿವಸ ಹತ್ತು ಹದಿನೈದು ಜನರ ತನಕ ನನ್ನ ಬಳಿಗೆ ಬರುತ್ತಾರೆ. ಸಾಕಾಯ್ತು ಎಂದು ಹೇಳಲಾದರೂ ನನ್ನಿಂದಾಗುವುದೇ? ನೀವು ನನ್ನನ್ನು ಮಾರಿಕೊಂಡಿದ್ದಲ್ಲವೇ, ಅವರೇನಾದರೂ ಹಣ ವಾಪಸ್ಸು ಕೇಳಿಬಿಟ್ಟರೇ?

ಇಲ್ಲಿಯ ದೊಡ್ಡಮ್ಮ ಅಂದರೆ ನನಗೆ ಹೆದರಿಕೆ. ಒಂದು ಸಲ ಜ್ವರ ಬಂದು ಮಲಗಿದ್ದಕ್ಕೆ ಬೆನ್ನಿಗೆ ಬರೆ ಹಾಕಿದರು: ಅವರೊಂದು ಕರಿಚೇಳನ್ನು ಸಾಕಿದ್ದಾರೆ – ಅದನ್ನು ತೋರಿಸಿ ಆಗಾಗ ಹೆದರಿಸುತ್ತಾರೆ. ಅಮ್ಮಾ ನೀವು ಇವನ್ನೆಲ್ಲ ಯೋಚಿಸಿ ಬೇಜಾರಾಗಬೇಡಿ. ನನ್ನನ್ನು ಮಾರಾಟಮಾಡಿ ಸಿಕ್ಕಿದ ಹಣದಿಂದ ನಮ್ಮ ಹಟ್ಟಿಯ ಮಾಡಿಗೆ ಹುಲ್ಲು ಹೊದೆಸಲು ಸಾಧ್ಯವಾಗಿದೆಯೇ? ಅಪ್ಪನ ಕೆಮ್ಮಿಗೆ ಔಷಧಿ ತಕ್ಕೊಂಡಿರುವಿರಾ? ವಳ್ಳಿ ಶಾಲೆಗೆ ಹೋಗುತ್ತಿಲ್ಲವೆ? ಅವಳಿಗೆ ಸ್ಲೇಟು, ಪುಸ್ತಕ ಕೊಡಿಸಿರುವಿರಾ? ಅರುಳ್‌ಗೆ ಹಾಲು ಸರಿಯಾಗಿ ಕೊಡುತ್ತಿಲ್ಲವೇ? ನಮ್ಮ ಕಾವೇರಿ ಬೆಕ್ಕು ಮರಿ ಹಾಕಿದವೆ? ಎಷ್ಟು ಮರಿಗಳು? ನನ್ನ ಮಲ್ಲಿಗೆ ಗಿಡಗಳು ಹೂವು ಬಿಟ್ಟಿರುವವೆ? ಅಥವಾ ನೆನಸದೆ ಬಾಡಿ ಹೋದವೆ?

ನನ್ನನ್ನು ಕೊಳ್ಳಲು ಬಂದ ಚೆಟ್ಟಿಯಾರರು ಆಗಾಗ ಇಲ್ಲಿಗೆ ಹೊಸ ಹುಡುಗಿಯರನ್ನು ಕರೆದುಕೊಂಡು ಬರುತ್ತಾರೆ. ಎಲ್ಲರೂ ನನ್ನ ವಯಸ್ಸಿನವರೇ: ಹನ್ನೆರಡು–ಹದಿಮೂರು ವರ್ಷದವರು. ನಾನಾಗ ನಿಮ್ಮನ್ನು ಕುರಿತು ವಿಚಾರಿಸುತ್ತೇನೆ. ಆತ ಕಣ್ಣು ಕೆಕ್ಕರಿಸುತ್ತಾರೆ, ''ಓಡಿ ಹೋಗಲು ನೋಡಬೇಡವೇ ಹುಡುಗಿ ಕೊಂದು ನಾಯಿಗೆ ಹಾಕಿಬಿಡುತ್ತೇನೆ ಅಷ್ಟೇ.'' ಎಂದು ಹೇಳ್ತಾರೆ. ಒಂದಿಷ್ಟು ಸಮಯ ಸಿಕ್ಕರೆ, ದೊಡ್ಡಮ್ಮನ ಕಣ್ಣು ತಪ್ಪಿಸಿ ನಾವು ಕುಂಟೆಬಿಲ್ಲೆ ಆಟ ಆಡುತ್ತೇವೆ.